ಹೆಚ್ಚು ಸಾಲವನ್ನು ಪಡೆದಿದ್ದರೆ ಆ ಎಲ್ಲಾ ಸಾಲಗಳನ್ನು ಪಾವತಿ ಮಾಡಿದರೆ ಮಾತ್ರ ಬಡ್ಡಿ ರಿಯಾಯಿತಿ ಪಡೆಯುವುದಕ್ಕೆ ಅರ್ಹನಾಗಿರುತ್ತಾನೆ. ಇದು ಸರ್ಕಾರದ ಆದೇಶ.

ಮತ್ತೊಂದು ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಕಾಫಿ, ತೆಂಗು ಮುಂತಾದ ಬೆಳೆಗಳಿಗೆ ಕೇವಲ ಬಡ್ಡಿ ಮಾತ್ರ ಕೆಲವು ಕಾಲದಲ್ಲಿ ಕೊಡಬೇಕಾಗುತ್ತದೆ, ಅಂಥ ಸಂದರ್ಭದಲ್ಲಿ ವಿನಾಯಿತಿ ಕೊಡಬೇಕೆಂದು ಹೇಳಿದ್ದಾರೆ. ಸರ್ಕಾರಿ ಆದೇಶದ ಪ್ರಕಾರ ಕಟ್ಟಬೇಕಾದ ಸಾಲದ ಕಂತುಗಳಲ್ಲಿ ಅಸಲನ್ನು ಪಾವತಿ ಮಾಡಿದರೆ ಮಾತ್ರ ಬಡ್ಡಿಯನ್ನು ವನ್ನಾ ಮಾಡುವಂಥದ್ದಿದೆ. ಸಹಕಾರ ಸಂಸ್ಥೆಗಳಿಗೆ ಬಡ್ಡಿ ರಿಯಾಯಿತಿಯನ್ನು ಆದಷ್ಟು ಜಾಗ್ರತೆ ಕೊಡಬೇಕೆಂಬ ಮಾತನ್ನು ಅವರು ಹೇಳಿದ್ದಾರೆ. ಸದರಿ ಬಡ್ಡಿ ರಿಯಾಯಿತಿಯನ್ನು ಸಹಕಾರಿ ಸಂಸ್ಥೆಗಳಿಗೆ ಆದಷ್ಟು ಜಾಗ್ರತೆ ಕೊಡುವ ಪ್ರಯತ್ನ ಮಾಡುತ್ತೇವೆ.

೯) ರಾಜ್ಯದಲ್ಲಿ ಖಾಲಿ ಇರುವ ೨೬೮ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಕರ್ನಾಟಕ ರಾಜ್ಯದ ಸರಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ೨೬೮ ಉಪನ್ಯಾಸಕರ ಹುದ್ದೆ ಖಾಲಿ ಇದ್ದು ಅದರಲ್ಲಿಯೂ ಮುಖ್ಯವಾಗಿ ದಕ್ಷಿಣಕನ್ನಡ, ಗುಲ್ಬರ್ಗ, ಹಾಸನ ಜಿಲ್ಲೆಗಳು ಉಪೇಕ್ಷೆಗೊಳಪಟ್ಟಿವೆ. ಕ್ರಮವಾಗಿ ಈ ಜಿಲ್ಲೆಗಳಲ್ಲಿ ೪೨, ೪೨, ೩೫ ಹುದ್ದೆಗಳು ಖಾಲಿ ಇವೆ. ಈ ತಾರತಮ್ಯ ನೀಗಬೇಕು. ಎಲ್ಲಾ ಹುದ್ದೆಗಳನ್ನು ತುಂಬಿಸಲು ಸರ್ಕಾರ ಅತಿ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕು. ರಾಜ್ಯ ಮಟ್ಟದ ನೇಮಕಾತಿ ಸಮಿತಿಯಿಂದ ಆಯ್ಕೆಯಾದ ಅಭ್ಯರ್ಥಿಗಳನ್ನು ವಿಳಂಬವಿಲ್ಲದೆ ನೇಮಿಸಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ ಆಳ್ವ.— ಮಾನ್ಯ ಅಧ್ಯಕ್ಷರೆ, ರಾಜ್ಯ ನೇಮಕಾತಿ ಸಮಿತಿಯ ಮೂಲಕ ಪದವಿ ಪೂರ್ವ ಕಾಲೇಜುಗಳಿಗೆ ಉಪನ್ಯಾಸಕರನ್ನು ನೇಮಿಸುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಆದಷ್ಟು ಬೇಗನೆ ಮಾಡುತ್ತೇವೆ.

೧೦) ಕೊಡಗು ಜಿಲ್ಲೆಯ ತಿತಿಮತಿ ವಲಯದಲ್ಲಿ ಆನೆಗೆ ವಿಷ ಪ್ರಾಶನ ಮಾಡಿರುವುದರ ಬಗ್ಗೆ ತನಿಖೆಗೆ ಒತ್ತಾಯ.

ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಕೊಡಗು ಜಿಲ್ಲೆಯ ತಿತಿಮತಿ ವಲಯದಲ್ಲಿನ ಕಟ್ಟೆಪುರದಿಂದ ಹಿಡಿದು ತಂದುಮಜ್ಜಿಗೆ ಹಳ್ಳದಲ್ಲಿ ಪಳಗಿಸಲಾಗಿದ್ದ ೩ ಕಾಡಾನೆಗಳ ಪೈಕಿ ಒಂದು ಆನೆ ಮೇ ೧೨ರಂದು ಸಾವಿಗೀಡಾಗಿದ್ದು, ಇದು ವಿಷ ಪ್ರಾಶನದಿಂದ ಸತ್ತಿರಬಹುದೆಂದು ಕೊಡಗಿನ ಜನರಲ್ಲಿ ಸಂಶಯ ಮೂಡಿದೆ. ಈ ಆನೆಯ ಮಾವುತ ಒಂದು ವಾರದ ಹಿಂದೆ ಲಾರಿಗೆ ಸಿಕ್ಕಿ ದುರ್ಮರಣಕ್ಕೀಡಾದ ದಾದರಿಂದ ಈ ಆನೆ ತನ್ನ ಮಾವುತನ ಹೊರತು ಬೇರೆ ಯಾರಿಗೂ ಬಗ್ಗುತ್ತಿರಲಿಲ್ಲವೆಂದೂ ಹಾಗೂ ನೋಡಿಕೊಳ್ಳಲು ಕಷ್ಟ ಆಗುಹುದೆಂದು ಬಾವಿಸಿ ವಿಷ ನೀಡಿರುವುದಾಗಿ ಸಂಶಯಿಸಲಾಗಿದೆ. ಆದರೆ ಆನೆಯ ದಂತದ ಸಲುವಾಗಿ ವಿಷ ಪ್ರಾಶನ ಮಾಡುತ್ತಿರುವುದಾಗಿ ಇತ್ತೀಚೆಗೆ ತಿಳಿದು ಬಂದಿದ್ದು ಈ ಆನೆಯನ್ನೂ ಕೂಡ ಅದಕ್ಕಾಗಿಯೇ ಕೊಂದಿರುವುದಾಗಿ ಸಂಶಯ ಪಡೆಲಾಗಿದೆ. ಮೈಸೂರಿನಲ್ಲಿ ಅರಣ್ಯ ಇಲಾಖೆಯ ನೌಕರರ ಕ್ಷೇಮಾಭಿವೃದ್ಧಿ ನಿಧಿಸಂಗ್ರಹಕ್ಕಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ಉದ್ಘಾಟಿಸಿ ಮಾತನಾಡುತ್ತಾ ಆರೋಗ್ಯ ಸಚಿವರಾದ ಶ್ರೀ ಬಿ. ರಾಚಯ್ಯನವರು ಆನೆ ಹಂತಕರ ಹಾವಳಿಯಿಂದ ಗುಡು ಆನೆಗಳ ಸಂಖ್ಯೆ ಇಳಿಮುಖವಾಗುತ್ತಿದೆಯೆಂದು ಹೇಳಿರುವುದನ್ನು ಇಲ್ಲಿ ಉದಾಹರಿಸಬಹುದಾಗಿದೆ. ಆದ್ದರಿಂದ ಆನೆಗಳ ವಿಷ ಪ್ರಾಶನದ ಹಿನ್ನೆಲೆಯಲ್ಲಿ ಯಾರು ಯಾರು ಇದ್ದಾರೆಂಬ ಬಗ್ಗೆ ಕೂಲಂಕಷ ತನಿಖೆ ನಡೆಸುವುದಲ್ಲದೆ ಇದರ ಹಿನ್ನೆಲೆಯಲ್ಲಿ ಇರುವವರನ್ನು ಪತ್ತೆ ಹಚ್ಚಿ ಇನ್ನು ಮುಂದೆ ಈ ರೀತಿ ಆಗದಂತೆ ಕ್ರಮ ಕೈಗೊಂಡು ತಪ್ಪಿತಸ್ಥರಿಗೆ ಉಗ್ರ ಶಿಕ್ಷೆಯನ್ನು ವಿಧಿಸಬೇಕೆಂದು ಅರಣ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯರಾಜ್ಯ ಮಂತ್ರಿ).—ಕೊಡಗು ಜಿಲ್ಲೆಯ ತಿತಿಮತಿ ವಲಯದಲ್ಲಿ, ಕಟ್ಟೆಪುರದಿಂದ ಹಿಡಿದು ಪಳಗಿಸಲಾಗಿದ್ದ ರಾಜೇಂದ್ರ ಎನ್ನುವ ಹೆಸರಿನ ಆನೆಯು ದಿನಾಂಕ ೧೧-೫-೧೯೮೮ರಂದು ರಾತ್ರಿ ಪಸರು ನೀಗಿರುವುದು ನಿಜವಾಗಿರುತ್ತದೆ.

ರಾಜೇಂದ್ರ ಆನೆಯಂ ಸುಮಾರಂ ಫೆಬ್ರುವರಿ ೧೯೮೮ ರಿಂದ ಅಸ್ವಸ್ಥವಾಗಿದ್ದು, ಪಶು ವೈದ್ಯಾಧಿಕಾರಿಗಳು ಗುಣಪಡಿಸಲು ಔಷಧೋಪಚಾರಗಳನ್ನು ಮಾಡುತ್ತಿದ್ದರೂ ಕೂಡ ಕೊನೆ ಕೊನೆಗೆ ನಿತ್ರಾಣಗೊಂಡು ಮೇಲಿನ ದಿನಾಂಕದಂದು ಮೃತಪಟ್ಟಿರುತ್ತದೆ.

ಇಲಾಖಾ ನಿಯಮದಂತೆ ಮೃತಪಟ್ಟ ಆನೆಯನ್ನು ಮರಣೋತ್ತರ ಪರೀಕ್ಷೆಗೆ ಗುರಿಪಡಿಸಿದ್ದು, ಮರಣೋತ್ತರ ಪರೀಕ್ಷೆಯ ವರದಿಯನುಸಾರ ಆನೆಯು ವಿಷ ಪ್ರಾಶನದಿಂದ ಸತ್ತಿರುವುದಿಲ್ಲವೆಂದು ಖಚಿತವಾಗಿರುತ್ತದೆ.

ಆನೆಯು ಮೃತನು ಈ ಆನೆಯು ಸಾವಿಗಿಂತ ಒಂದು ವಾರದ ಮುಂಚಿತವಾಗಿ ಲಾರಿ ಅಪಘಾತದಿಂದ ಸತ್ತಿರುವುದು ನಿಜ. ಮೃತನು ಸತ್ತ ನಂತರ ಅದೇ ಆನೆಗೆ ಸಂಬಂಧಪಟ್ಟ ಕಾವಾಡಿಯು ಪಳಗಿಸುತ್ತಿದ್ದವನಿಂದು ತಿಳಿದು ಬಂದಿರುವುದಲ್ಲದೆ ಆನೆಯು ಯಾವುದೇ ತೊಂದರೆಯನ್ನು ಕೊಡುತ್ತಿರಲಿಲ್ಲ

ಈ ಸತ್ತ ಆನೆಯು ದಂತವು ಅಂದಾಜು ೯ ಕೆ. ಜಿ.ಯಷ್ಟು ತೂಕವಾಗುವುದೆಂದೂ ಮತ್ತು ಈ ದಂತದ ಜೊತೆಯು ತಿತಿಮತಿ ವಲಯ ಅರಣ್ಯಾಧಿಕಾರಿಗಳ ಸುಬರ್ದಿನಲ್ಲಿರುತ್ತದೆ.

ಮೇಲೆ ವಿವರಿಸಿದಂತೆ, ರಾಜೇಂದ್ರ ಆನೆಯು ಶಂಕಾಸ್ಪದವಾಗಿ ಸತ್ತಿರುವುದಿಲ್ಲ. ಅಲ್ಲದೆ, ಇದರ ದಂತಕ್ಕಾಗಿ ವಿಷಪ್ರಾಶನೆ ಮಾಡಿ, ಯಾರೂ ಕೊಂಡಿರುವುದಿಲ್ಲ.

ಶಾಸನ ರಚನೆ ಕಾರ್ಯಕಲಾಪಗಳು

೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಪತ್ರ ಮಂಡನೆ ಮಾಡುವ ಸಮಯದಲ್ಲಿ ಹಲವಾರು ವಿನಾಯಿತಿಗಳನ್ನು ಮಾರಾಟ ತೆರಿಗೆ ವಿಷಯದಲ್ಲಿ ಸೂಚಿಸಿದ್ದರು. ಆ ವಿನಾಯಿತಿಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾನೂನಿನಲ್ಲಿ ತಿದ್ದುಪಡಿ ಮಾಡಲಾಗಿದೆ. ಇದಕ್ಕೆ ಜೊತೆಗೆ ಕೆಲವು ತೆರಿಗೆಗಳ ದರಗಳನ್ನು ಇಳಿಸಿದ್ದೇವೆ. ಆ ದರಗಳ ಇಳಿತಕ್ಕೆ ಸಂಬಂಧಪಟ್ಟ ತಿದ್ದುಪಡಿಗಳು ಕೂಡ ಇದರಲ್ಲಿವೆ. ವರ್ಷವನ್ನು ಮಾರ್ಚ್ ತಿಂ ರಿಂದ ಪ್ರಾರಂಭವಾಗಬೇಕಂ ಎಂದು ಇದರಲ್ಲಿ ತಿದ್ದುಪಡಿ ಸೂಚನೆ ಮಾಡಿದ್ದೇವೆ. ಇದನ್ನು ಕರ್ನಾಟಕ ಹೈಕೋರ್ಟ್ ತೀರ್ಮಾನದಂತೆ ಮಾಡಲಾಗಿದೆ.

೨-೦೦ ಪಿ. ಎಂ.

ಇದರ ಜೊತೆಗೆ ಇದರಲ್ಲಿ ಬರತಕ್ಕ ಅನೇಕ ವಸ್ತುಗಳ ಹೆಸರನ್ನು ಅಕ್ಷರ ಮಾಲೆಯ ರೀತ್ಯ ಇದರಲ್ಲಿ ಅಳವಡಿಸಲಾಗಿದೆ. ಸುಲಭವಾಗಿ ಆ ಪಟ್ಟಿಯನ್ನು ನೋಡಲಿಕ್ಕೆ ಅನುಕೂಲವಾಗಲಿ ಅಂತ ಹೇಳಿ ಇದರಲ್ಲಿ ತಿದ್ದುಪಡಿಯನ್ನು ತರಲಾಗಿದ್ದು ಈ ಒಂದು ತಿದ್ದುಪಡಿಯಲ್ಲಿ ಅಡಕವಾಗಿರತಕ್ಕ ವಿಷಯಗಳೂ ಅದೇ ಆಗಿವೆ. ಇದರ ಜೊತೆಗೆ ಒಂದು ತಿದ್ದುಪಡಿಯನ್ನೂ ಕೂಡ ಇದರಲ್ಲಿ ಸೂಚಿಸಿದ್ದೇವೆ. ಈ ಒಂದು ತಿದ್ದುಪಡಿಅತ್ಯವಶ್ಯಕವಾಗಿ ಕಂಡುಬಂದದ್ದರಿಂದ ಅದನ್ನು ಇದರಲ್ಲಿ ಸೂಚಿಸಲಾಗಿದೆ. ಆ ಒಂದು ತಿದ್ದುಪಡಿ ಏನೆಂದರೆ ತಿದ್ದುಪಡಿ

"Provided further that no tax under this sub-section shall be levied and collected upto the 31st day of May 1988